# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 15/2022**

| | | | |
|---|---|---|---|
| ಹೆಸರು | : | ಯಮನಪ್ಪ ಕೆ.ಜಿ | ಫ್ರಾಸಾ-7 |
| ತಂದೆಯ ಹೆಸರು | : | ರಂಗಪ್ಪ | ಚಾಸಾ- 16 |
| ವರ್ಷ | : | 37 ವರ್ಷ | |
| ಉದ್ಯೋಗ | : | ನೌಕರ | |
| ವಿಳಾಸ | : | ಜಡ್ರಾಮನಕುಂಟೆ | |

ದಿಃ 09.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಚಾಸಾ-18/ರೇಣವ್ವ ನನ್ನ ತಾಯಿ. ಮೃತ ಯಮನಪ್ಪ ಹಾಗೂ ನ್ಯಾಯಾಲಯದ ಮುಂದಿರುವ 1 ನೇ ಆರೋಪಿತರು ನನ್ನ ತಾಯಿ ಚಾಸಾ-18 ರವರ ತಮ್ಮಂದಿರು. 1 ನೇ ಆರೋಪಿ ಬೆಣ್ಣೂರ ಗ್ರಾಮದಲ್ಲಿ ವಾಸವಾಗಿರುತ್ತಾನೆ. ಮೃತ ಯಮನಪ್ಪ ತನ್ನ ಕುಟುಂಬದೊಂದಿಗೆ ಜಡ್ರಾಮಕುಂಟಿ ಗ್ರಾಮದಲ್ಲಿ ವಾಸವಾಗಿದ್ದನು. ನಾನು ಡಿ ಡಿ ಪಿ ಐ ಕಚೇರಿಯಲ್ಲಿ ಡಿ ದರ್ಜೆ ನೌಕರ ಎಂದು ಕೆಲಸ ಮಾಡುತ್ತಿದ್ದೇನೆ.

2. ನನ್ನ ತಾಯಿ ರೇಣವ್ವ, 1 ನೇ ಆರೋಪಿ ಹಾಗೂ ಮೃತ ಯಮನಪ್ಪ ರವರಿಗೆ ಸೇರಿದ ಆಸ್ತಿ ಬೆಣ್ಣೂರ ಗ್ರಾಮದ ಹದ್ದಿಯಲ್ಲಿ ಬರುತ್ತದೆ. ನನ್ನ ಮೊಬೈಲ ಸಂ. 6360099805 ಆಗಿರುತ್ತದೆ. ಸದರಿ ಮೊಬೈಲ ಸಿಮ್ ಕಾರ್ಡ ನನ್ನ ತಮ್ಮ ಮಹಾದೇವ ರವರ ಹೆಸರಿನಲ್ಲಿ ಇರುತ್ತದೆ. ನನ್ನ ತಮ್ಮ ಮಹಾದೇವ ರವರು 3 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನಮ್ಮ ಬಳಿ ಬುಲೆರೋ ವಾಹನ ಇರುತ್ತದೆ. ನಾನು ಪ್ರತಿನಿತ್ಯ ಜಡ್ರಾಮಕುಂಟಿ ಗ್ರಾಮದಿಂದ ಬಾಗಲಕೋಟೆಯ ಡಿಡಿಪಿಐ ಕಚೇರಿಗೆ ಕೆಸಲಕ್ಕೆ ಬಂದು ಹೋಗಿ ಮಾಡುತ್ತೇನೆ.

3. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ತಾಯಿ ನನಗೆ ಕರೆ ಮಾಡಿ ಯಾವುದೇ ವಿಚಾರ ತಿಳಿಸಿರುವುದಿಲ್ಲ. ನನ್ನ ಮಾವ ಯಮನಪ್ಪ ಸುಮಾರು 2 ವರ್ಷಗಳ

ಹಿಂದೆ ಮೃತಪಟ್ಟಿರುತ್ತಾರೆ. ಆಸ್ತಿ ವಿಚಾರವಾಗಿ ಯಮನಪ್ಪ ಮತ್ತು ಅವರ ಸಹೋದರ 1 ನೇ ಆರೋಪಿ ಜೊತೆ ಬೆಣ್ಣೂರ ಗ್ರಾಮದಲ್ಲಿ ಗಲಾಟೆಯಲ್ಲಿ ಪೆಟ್ಟಾಗಿ ಬಾಗಲಕೋಟೆಯ ಕಟ್ಟಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾಗ ಮೃತಪಟ್ಟಿರುತ್ತಾರೆ ಎಂದು ತಿಳಿದು ಬಂದಿತು. ನಾನು ಬೆಣ್ಣೂರ ಗ್ರಾಮಕ್ಕೆ ಹೋಗಿರುವುದಿಲ್ಲ ಮತ್ತು ನನ್ನ ಮಾವ ಯಮನಪ್ಪ ರವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗಾಗಿ ದಾಖಲಿಸಿರುವುದಿಲ್ಲ. ಈ ಪ್ರಕರಣದ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ. 1 ನೇ ಆರೋಪಿ ನನಗೆ ಕರೆ ಮಾಡಿ ಯಾವುದೇ ವಿಚಾರ ತಿಳಿಸಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

## ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

1. ದಿಃ09.12.2021 ರಂದು ನನ್ನ ತಾಯಿ ಚಾಸಾ-18 ರವರು ಮಧ್ಯಾಹ್ನ 1-30 ಗಂಟೆಗೆ ನನಗೆ ಕರೆ ಮಾಡಿ ಯಮನಪ್ಪ ಮತ್ತು 1 ನೇ ಆರೋಪಿ ಬಸಪ್ಪ ರವರ ಮಧ್ಯ ಆಸ್ತಿ ವಿಚಾರವಾಗಿ ಗಲಾಟೆ ಆದ ವಿಚಾರ ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಸಂಜೆ 6-15 ರಿಂದ 7-15 ಗಂಟೆ ಸಮಯದಲ್ಲಿ ಚಾಸಾ-14 ರವರು ನನಗೆ ಕರೆ ಮಾಡಿ ಆಸ್ತಿ ವಿಚಾರವಾಗಿ 1 ನೇ ಆರೋಪಿ ಬಸಪ್ಪ ಮತ್ತು ಆತನ ಮಗ 2 ನೇ ಆರೋಪಿ ಹನಮಂತ ರವರು ಯಮನಪ್ಪನ ಮೇಲೆ ಗಲಾಟೆ ಮಾಡಿ ಆತನಿಗೆ ಕಲ್ಲು ಮತ್ತು ಕೊಡಲಿ ಕಾವಿನಿಂದ ಹಲ್ಲೆ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ 1 ನೇ ಆರೋಪಿ ಸಹ ನನಗೆ ಕರೆ ಮಾಡಿ "ಹುಲಿಯಂತಹ ಮಾವನನ್ನು ಸಾಕಿದ್ದೀ ಆತ ಹೊಲ ಕೊಡು ಅಂತಾ ಬೆನ್ನು ಬಿದ್ದಿದ್ದ ಆತನನ್ನು ಈಗ ನಮ್ಮ ಊರಿನ ಶಾಲೆ ಹಿಂದೆ ನಮ್ಮ ಮನೆ ಹತ್ತಿರ ಹೊಡೆದು ಒಗದೇನಿ ಬಂದು ಒಯ್ಯುತೀಯೋ ಏನ್ ನಿಮ್ಮ ಅವ್ವ ಒಯ್ಯುತಾಳೋ ಕೇಳು'' ಅಂತಾ ಹೇಳಿದ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನಾನು ಮನೆಗೆ ಬಂದು ನನ್ನ ತಾಯಿ ಮತ್ತು ನನ್ನ ಹೆಂಡತಿಗೆ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.

2. ನಂತರ ನಾನು, ಚಾಸಾ-18 ಹಾಗೂ ಮಂಜುನಾಥ ರವರು ನಮ್ಮ ಬುಲೆರೋ ವಾಹನ ತೆಗೆದುಕೊಂಡು ಬೆಣ್ಣೂರ ಗ್ರಾಮಕ್ಕೆ ಹೋಗಿ ನೋಡಿದಾಗ ಯಮನಪ್ಪ ರಕ್ತದ ಮಡುವಿನಲ್ಲಿ

ಬಿದ್ದಿದ್ದು, ಅಲ್ಲಿಯೆ ಇದ್ದ ಚಾಸಾ-14 ರವರನ್ನು ವಿಚಾರಿಸಿದಾಗ 1 ಮತ್ತು 2 ನೇ ಆರೋಪಿತರು ಕಲ್ಲು ಮತ್ತು ಕೊಡಲಿ ಕಾವಿನಿಂದ ಯಮನಪ್ಪನಿಗೆ ಹಲ್ಲೆ ಮಾಡಿದ ವಿಚಾರ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಯಮನಪ್ಪ ನನ್ನು ಚಾಸಾ-1 ರವರ ಮನೆಗೆ ಸಾಗಿಸಿದ್ದು ಚಾಸಾ-1 ರವರಿಗೆ ಚಿಕಿತ್ಸೆಗಾಗಿ ಹಣ ಇಲ್ಲದೆ ಇದ್ದ ಕಾರಣದಿಂದ ಅವರ ಮನೆಯಲ್ಲಿ ಇಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ವೈದ್ಯರಾದ ಚಾಸಾ-20 ರವರನ್ನು ಮನೆಗೆ ಕರೆಯಿಸಿ ಯಮನಪ್ಪನನ್ನು ಪರೀಕ್ಷೆ ಮಾಡಿಸಿದಾಗ, ಅವರು ಆಸ್ಪತ್ರೆಗೆ ಸಾಗಿಸಲು ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 11.12.2021 ರಂದು ಬೆಳಗಿನ ಜಾವ 2 ಗಂಟೆಗೆ ಚಾಸಾ-1 ರವರು ನಮ್ಮ ಮನೆಗೆ ಬಂದು ಯಮನಪ್ಪ ರವರಿಗೆ ಬಹಳ ತೊಂದರೆ ಆಗಿರುತ್ತದೆ, ಆಸ್ಪತ್ರೆಗೆ ಸಾಗಿಸಬೇಕು ಎಂದು ಕೇಳಿಕೊಂಡಾಗ ನಮ್ಮ ಬುಲೆರೊ ವಾಹನದಲ್ಲಿ ನಾನು, ಚಾಸಾ-1 ಹಾಗೂ 15 ರವರು ಸೇರಿಕೊಂಡು ಯಮನಪ್ಪನನ್ನು ಬಾಗಲಕೋಟೆ ಕಟ್ಟಿ ಆಸ್ಪತ್ರೆಗೆ ಬೆಳಗಿನ ಜಾವ 5 ಗಂಟೆಗೆ ಸಾಗಿಸಿ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

3. ದಿಃ 12.12.2021 ರಂದು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ''ನಾನು ಮೇಲಿನ ವಿಳಾಸದಲ್ಲಿ ವಾಸವಾಗಿರುತ್ತೇನೆ........... ಪಿರ್ಯಾದಿ ಕೊಟ್ಟಿರುತ್ತಾರೆ'' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-11 ಎಂದು ಗುರುತಿಸಲಾಯಿತು.

4. ದಿಃ 13.12.2021 ರಂದು ಯಮನಪ್ಪ ಚಿಕಿತ್ಸೆ ಫಲಕಾರಿಯಾಗದೆ ಆರೋಪಿತರು ಆತನ ಮೇಲೆ ಹಲ್ಲೆ ಮಾಡಿದ್ದರಿಂದಲೇ ಮಧ್ಯಾಹ್ನ 1-30 ಗಂಟೆಗೆ ಮೃತಪಟ್ಟ ವಿಚಾರ ತಿಳಿದು ನಾನು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಮುಂದುವರೆದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಂದುವರೆದ ಹೇಳಿಕೆಯಲ್ಲಿ ''ನಾನು ದಿಃ 12.12.2021 ರಂದು.......... ಇಬ್ಬರೂ ಕೂಡಿ ಮಾಡಿರುತ್ತಾರೆ '' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-12 ಎಂದು ಗುರುತಿಸಲಾಯಿತು. ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ. ವಕೀಲರಿಂದ ಆರೋಪಿ ಪರ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .